# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತಗಂಗೋತ್ರಿ, ಮೈಸೂರು – ೫೭೦ ೦೦೬

ಸಂಖ್ಯೆ: ಕರಾಮುವಿ/ಡಿಎಸಿ/67/2022–23 ದಿನಾಂಕ: 10–02–2023

## ಕಚೇರಿ ಆದೇಶ

**ವಿಷಯ:** ವಿಶ್ವವಿದ್ಯಾನಿಲಯದ ವಿಜ್ಞಾನ ಶಿಕ್ಷಣಕ್ರಮಗಳ ಪ್ರವೇಶಾತಿಯನ್ನು ಹೆಚ್ಚಿಸುವ ಸಂಬಂಧ Admission Drive ಗೆ ಉಸ್ತುವಾರಿ ಸಮಿತಿ ರಚಿಸಿರುವ ಬಗ್ಗೆ.

**ಉಲ್ಲೇಖ:** 1. ಎಲ್ಲಾ ವಿಜ್ಞಾನ ವಿಭಾಗಗಳ ಅಧ್ಯಕ್ಷರುಗಳ ಸಭೆಯ ನಡಾವಳಿ ದಿನಾಂಕ:19–01–2023
2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:09–02–2023

* * * *

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಎಲ್ಲಾ ಸ್ನಾತಕ/ಸ್ನಾತಕೋತ್ತರ ವಿಜ್ಞಾನ ಶಿಕ್ಷಣ ಕ್ರಮಗಳ ಪ್ರವೇಶಾತಿಯನ್ನು ಹೆಚ್ಚಿಸುವ ಸಂಬಂಧ ವಿವಿಯ ವಿಜ್ಞಾನ ವಿಭಾಗಗಳ ಅಧ್ಯಕ್ಷರುಗಳು ದಿನಾಂಕ: 19–01–2023ರಂದು ಸಭೆ ನಡೆಸಿ ಸದರಿ ಸಭೆಯಲ್ಲಿ ರಾಜ್ಯಾದ್ಯಂತ ಎಲ್ಲಾ ಜಿಲ್ಲಾವಾರು ಕೇಂದ್ರಗಳಿಗೆ ಭೇಟಿ ನೀಡಿ ವಿಶ್ವವಿದ್ಯಾನಿಲಯವು ನಡೆಸುತ್ತಿರುವ ವಿಜ್ಞಾನ ಶಿಕ್ಷಣಕ್ರಮಗಳಿಗೆ ಸಂಬಂಧಿಸಿದಂತೆ ಕಾಲೇಜುಗಳು, ಶಿಕ್ಷಣ ಸಂಸ್ಥೆಗಳು, ಸರ್ಕಾರಿ ಕಚೇರಿಗಳು, ವಿವಿಧ ಉದ್ಯಮಿಗಳು ಹಾಗು ಇನ್ನಿತರೆ ಕ್ಷೇತ್ರಗಳಿಗೆ ತೆರಳಿ ಮಾಹಿತಿ ನೀಡಲು ಮತ್ತು ಪ್ರಾಯೋಗಿಕ ವಿಷಯಗಳಿಗೆ ಸಂಬಂಧಿಸಿದಂತೆ, ಪ್ರಯೋಗಾಲಯಗಳ ಕಾಲೇಜುಗಳನ್ನು ಗುರುತಿಸುವುದು ಮತ್ತು ನಿಯಮಾನುಸಾರ ಪ್ರಯೋಗಾಲಯ ಕೇಂದ್ರಗಳನ್ನು ಗುರುತಿಸಿಕೊಂಡು ಅನುಮೋದನೆ ಪಡೆದು ಪ್ರಾಯೋಗಿಕ ಪರೀಕ್ಷೆಗಳನ್ನು ಜಿಲ್ಲಾ ಕೇಂದ್ರಗಳಲ್ಲಿ ನಡೆಸಲು ಅನುಕೂಲವಾಗುವಂತೆ ಕ್ರಮಕೈಗೊಳ್ಳಲು ಮಾನ್ಯ ಕುಲಪತಿಗಳ ಸೂಚನೆ ಅನ್ವಯ ಅಧ್ಯಯನ ವಿಭಾಗಗಳ ಅಧ್ಯಕ್ಷರು ಸಭೆ ನಡೆಸಿ Admission Drive ತೆರಳಲು ವಿಜ್ಞಾನ ವಿಭಾಗವಾರು ಪಟ್ಟಿಯೊಂದಿಗೆ ಉಲ್ಲೇಖ(1)ರಂತೆ ನಡವಳಿಯನ್ನು ಸಲ್ಲಿಸಿದ್ದು ಈ ಸಂಬಂಧ ಒಂದು ಉಸ್ತುವಾರಿ ಸಮಿತಿಯನ್ನು ರಚಿಸಲು ಮಾನ್ಯ ಕುಲಪತಿಗಳು ಅನುಮೋದನೆ ನೀಡಿರುವ ಹಿನ್ನೆಯಲ್ಲಿ ಈ ಕಚೇರಿ ಆದೇಶ ಹೊರಡಿಸಲಾಗಿದೆ.

| ಕ್ರಮ ಸಂಖ್ಯೆ | ಅಧ್ಯಾಪಕರುಗಳ ಹೆಸರು | ಸಂಯೋಜನಾಧಿ/ಸದಸ್ಯರು |
|---|---|---|
| 01 | ಡಾ. ಎನ್.ಜಿ. ರಾಜು, ಸಹಾಯಕ ಪ್ರಾಧ್ಯಾಪಕರು<br>ಜೈವಿಕ ತಂತ್ರಜ್ಞಾನ ವಿಭಾಗ,<br>ಕರಾಮುವಿ, ಮೈಸೂರು. | ಸಂಯೋಜನಾಧಿಕಾರಿ |
| 02 | ಡಾ. ಎಂ.ಎಸ್ ಹೇಮಲತಾ, ಸಹಾಯಕ ಪ್ರಾಧ್ಯಾಪಕರು,<br>ಆಹಾರ ವಿಜ್ಞಾನ ಮತ್ತು ಪೌಷ್ಠಿಕತೆ ವಿಭಾಗ,<br>ಕರಾಮುವಿ, ಮೈಸೂರು. | ಸದಸ್ಯರು |
| 03 | ಶ್ರೀ. ಎಸ್.ವಿ ನಿರಂಜನ್, ಸಹಾಯಕ ಪ್ರಾಧ್ಯಾಪಕರು,<br>ಭೌತಶಾಸ್ತ್ರ ಅಧ್ಯಯನ ವಿಭಾಗ,<br>ಕರಾಮುವಿ, ಮೈಸೂರು. | ಸದಸ್ಯರು |

ಸದರಿ ಸಮಿತಿಯ ಸಂಯೋಜನಾಧಿಕಾರಿ Admission Driveಗೆ ಸಂಬಂಧಿಸಿದಂತೆ, ಕಾರ್ಯ ಚಟುವಟಿಕೆಯನ್ನು ರೂಪಿಸಿ Admission Driveಗೆ ತೆರಳಲು ಬೇಕಾಗುವ ವಾಹನ, ಭತ್ಯೆ ಇತ್ಯಾದಿ ಖರ್ಚು ವೆಚ್ಚದ ಬಗ್ಗೆ ಪ್ರತ್ಯೇಕ ಕಡತ ಮಂಡಿಸಿ ಅನುಮೋದನೆ ಪಡೆದು ಕ್ರಮವಹಿಸಿ Admission Drive ಯನ್ನು ವ್ಯವಸ್ಥಿತವಾಗಿ ನಡೆಸಿ ವರದಿಯನ್ನು ಡೀನ್(ಶೈ) ವಿಭಾಗಕ್ಕೆ ಸಲ್ಲಿಸಲು ತಿಳಿಸಲಾಗಿದೆ.

ಆದೇಶದ ಮೇರೆಗೆ

13/02/2023

ಕುಲಸಚಿವ

ಗೆ:

**ಉಸ್ತುವಾರಿ ಸಮಿತಿಯ ಸಂಯೋಜನಾಧಿಕಾರಿಗಳು ಹಾಗೂ ಸದಸ್ಯರುಗಳಿಗೆ, ಕರಾಮುವಿ, ಮೈಸೂರು.**

ಪ್ರತಿ :

1. ಎಲ್ಲಾ ಶಾಸನಬದ್ಧ ಅಧಿಕಾರಿಗಳು ಕರಾಮುವಿ, ಮೈಸೂರು.
2. ಡೀನ್(ಅಧ್ಯಯನ ಕೇಂದ್ರಗಳು) ಕರಾಮುವಿ, ಮೈಸೂರು.
3. ಎಲ್ಲಾ ವಿಜ್ಞಾನ ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳ ಅಧ್ಯಕ್ಷರುಗಳಿಗೆ ಕರಾಮುವಿ, ಮೈಸೂರು.
4. ನಿರ್ದೇಶಕರು, ಪ್ರವೇಶಾತಿ ವಿಭಾಗ ಕರಾಮುವಿ, ಮೈಸೂರು.
5. ಸಂಯೋಜನಾಧಿಕಾರಿ, ನ್ಯಾಕ್ ಘಟಕ, ಕರಾಮುವಿ, ಮೈಸೂರು.
6. PMEB ಘಟಕ, ಕರಾಮುವಿ, ಮೈಸೂರು.
7. ನೋಡಲ್ ಅಧಿಕಾರಿ ವೆಬ್‌ಸೈಟ್ ನಿರ್ವಹಣೆ ಕರಾಮುವಿ, ಮೈಸೂರು(ವೆಬ್ ಸೈಟ್‌ನಲ್ಲಿ ಪ್ರಕಟಿಸಲು)
8. ಕಚೇರಿ ಪ್ರತಿ.